ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಕಾರವಾರ (ಉ.ಕ)
District officer,
Backward Class Welfare Department,
Karwar, Uttara Kannada

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
**ಜಿಲ್ಲಾಧಿಕಾರಿಗಳ ಕಾರ್ಯಾಲಯ,**
ಕೊಠಡಿ ಸಂಖ್ಯೆ-001, ಕಾವಾರ ಉತ್ತರ ಕನ್ನಡ
ಫೋನ್ :(08382) 226588 & 226589
ಇ-ಮೇಲ್ : dobcmut t ar akannada@gmai l .com
& dobcw-karwar@kar.gov.in

ಸಂಖ್ಯೆ:ಬಿಸಿಡಬ್ಲ್ಯೂ/ಸೇ.ತ.ಶಾ/ಸಿಆರ್-42/2022-23

ದಿನಾಂಕ:20-02-2023

# ಸೂಚನಾ ಪತ್ರ

**ವಿಷಯ:** ಉತ್ತರ ಕನ್ನಡ ಜಿಲ್ಲೆಯ ವೀರ ಬಹದ್ದೂರ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ ಮಾಜಾಳಿ, ಕಾರವಾರ ಇಲ್ಲಿಗೆ ದೈಹಿಕ ಸಹಿಷ್ಣುತಾ ಪರೀಕ್ಷೆ ಮತ್ತು ವೈದ್ಯಕೀಯ ಪರೀಕ್ಷೆಗೆ ಹಾಜರಾಗುವ ಕುರಿತು.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 393 ಬಿಎಂಎಸ್ 2022 ಬೆಂಗಳೂರು ದಿನಾಂಕ:20-06-2022

2) ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:-BCWD/TRAINING-4/ARMY/CR-01/2022-23 ದಿ:19-01-2023.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರಲ್ಲಿ ವೀರ ಬಹದ್ದೂರ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆಯನ್ನು ಉತ್ತರಕನ್ನಡ ಜಿಲ್ಲೆಯಲ್ಲಿ ಆರಂಭಿಸಲು ಸರ್ಕಾರವು ಆದೇಶಿಸಿದೆ. ಉಲ್ಲೇಖ (2) ರಲ್ಲಿ ಸದರಿ ತರಬೇತಿಗೆ ಈಗಾಗಲೇ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ದಿನಾಂಕ:15-02-2023 ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವಾಗಿತ್ತು. ಈ ತರಬೇತಿಗೆ ನಿಗಧಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ ನಿಗದಿತ ವಯೋಮಿತಿಯಲ್ಲಿರುವ (ದಿನಾಂಕ:01-12-2003 ರಿಂದ 01-07-2006 ರೊಳಗೆ ಜನಿಸಿರುವ ಅಭ್ಯರ್ಥಿಗಳು) ಅಭ್ಯರ್ಥಿಗಳಿಗೆ ದೈಹಿಕ ಸಹಿಷ್ಣುತಾ ತರಬೇತಿಗೆ ಆಹ್ವಾನಿಸಲಾಗಿದೆ.

ಆದ್ದರಿಂದ ವೀರ ಬಹದ್ದೂರ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆಗೆ ಅರ್ಜಿ ಸಲ್ಲಿಸಿದ ಈ ಪತ್ರದೊಂದಿಗೆ ಲಗತ್ತಿಸಿದ ಅರ್ಹ ಅಭ್ಯರ್ಥಿಗಳಿಗೆ **ದಿನಾಂಕ:25-02-2023 ರಂದು ಮುಂಜಾನೆ:7.00 ಗಂಟೆಗೆ ಶ್ರೀ ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣ ಶಿರಸಿಯಲ್ಲಿ** ದೈಹಿಕ ಸಹಿಷ್ಣುತಾ ಪರೀಕ್ಷೆಗಾಗಿ ಆಹ್ವಾನಿಸಲಾಗಿದೆ. ಸದರಿ ದೈಹಿಕ ಸಹಿಷ್ಣುತಾ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳೊಂದಿಗೆ ಅಭ್ಯರ್ಥಿಗಳು ಹಾಜರಾಗಲು ಸೂಚಿಸಿದೆ.

1) ಅರ್ಜಿ ಸಲ್ಲಿಸಿದ ONLINE APPLICATION ಪ್ರತಿ.
2) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ.
3) ಎರಡು ಫೋಟೊ (PASSPORT SIZE).
4) ಆಧಾರ್ ಕಾರ್ಡ (ಮೂಲ ಪ್ರತಿ).
5) ಜಾತಿ ಆದಾಯ ಪ್ರಮಾಣಪತ್ರ.

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಉತ್ತರಕನ್ನಡ, ಕಾರವಾರ